ಸಂಕೇತ ಸಂಖ್ಯೆ : **01-K** **ವಿಷಯ : ಪ್ರಥಮ ಭಾಷೆ — ಕನ್ನಡ**

**Code No. : 01-K Subject : First Language — KANNADA**

**( ಹಳೆ ಪಠ್ಯಕ್ರಮ / Old Syllabus )**

**( ಪುನರಾವರ್ತಿತ ಅಭ್ಯರ್ಥಿ + ಪುನರಾವರ್ತಿತ ಖಾಸಗಿ ಅಭ್ಯರ್ಥಿ / Regular Repeater + Private Repeater )**

***ಸಾಮಾನ್ಯ ಸೂಚನೆಗಳು :***

i) ಈ ಪ್ರಶ್ನೋತ್ತರ ಕಿರುಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 63 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಯ ಉತ್ತರಕ್ಕಾಗಿ ಜಾಗವನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ, ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಗಳ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಸೀಸದ ಕಡ್ಡಿ (ಪೆನ್ಸಿಲ್) ಯಿಂದ ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತು ಭೂಪಟಗಳನ್ನು ಬಿಟ್ಟು).

vi) ಬಹು–ಆಯ್ಕೆ, ಖಾಲಿ ಸ್ಥಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

viii) ನಿಮ್ಮ ಪ್ರಶ್ನೋತ್ತರ ಕಿರುಪುಸ್ತಕದ ಬಲಭಾಗದಲ್ಲಿರುವ ಗೆರೆಯ ಪಕ್ಕದ ಖಾಲಿ ಜಾಗದಲ್ಲಿ ಯಾವುದೇ ರೀತಿಯ ಬರಹಗಳನ್ನು ಬರೆಯಬಾರದು.

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ : $15 \times 1 = 15$

1. ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ಅಕ್ಷರಗಳ ಸಂಖ್ಯೆ

   (ಎ) 45 (ಬಿ) 49

   (ಸಿ) 47 (ಡಿ) 51

2. "ಮಕ್ಕಳು ಶಾಲೆಗೆ ಹೋದರೆಂಬ ಸುದ್ದಿ ಕೇಳಿ ಜನರು ಅಲ್ಲಿಗೆ ಓಡಿಬಂದರು" — ಈ ವಾಕ್ಯವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ

   (ಎ) ಸಾಮಾನ್ಯ ವಾಕ್ಯ (ಬಿ) ಸಂಯುಕ್ತ ವಾಕ್ಯ

   (ಸಿ) ಮಿಶ್ರ ವಾಕ್ಯ (ಡಿ) ಸಂಯೋಜಿತ ವಾಕ್ಯ

3. 'ಗುಮಾಸ್ತ' ಪದವು ಇಂತಹ ನಾಮಪದಕ್ಕೆ ಉದಾಹರಣೆಯಾಗಿದೆ

   (ಎ) ಅಂಕಿತನಾಮ (ಬಿ) ಕೃದಂತನಾಮ

   (ಸಿ) ರೂಢನಾಮ (ಡಿ) ಅನ್ವರ್ಥನಾಮ

4. 'ಕಡಿಮೆಯಾಗಲಿ' ಪದದ ಸಂಭಾವನಾರ್ಥಕ ರೂಪ

   (ಎ) ಕಡಿಮೆಯಾದೀತು (ಬಿ) ಕಡಿಮೆಯಾಗದು

   (ಸಿ) ಕಡಿಮೆ (ಡಿ) ಕಡಿಮೆಯಿಲ್ಲ

5. ಹಾಗೆಲ್ಲ ನಾನು ಮಕ್ಕಳನ್ನು ಸೇರಿಸುತ್ತಿಲ್ಲ ಸ್ವಾಮಿ — ಇಲ್ಲಿ ಬಳಸಬೇಕಾದ ಲೇಖನ ಚಿಹ್ನೆ

   (ಎ) ಆವರಣ ಚಿಹ್ನೆ (ಬಿ) ಅಲ್ಪವಿರಾಮ ಚಿಹ್ನೆ

   (ಸಿ) ಅರ್ಧವಿರಾಮ ಚಿಹ್ನೆ (ಡಿ) ಭಾವಸೂಚಕ ಚಿಹ್ನೆ

6. 'ಅಂಜಿಕೆ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ

   (ಎ) ಕೃದಂತಾವ್ಯಯ (ಬಿ) ಕೃದಂತ ಭಾವನಾಮ

   (ಸಿ) ಕೃದಂತನಾಮ (ಡಿ) ಕೃದಂತ

7. 'ಕಾರಣಾಂತರ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

   (ಎ) ಆದೇಶ ಸಂಧಿ (ಬಿ) ಲೋಪ ಸಂಧಿ

   (ಸಿ) ಗುಣ ಸಂಧಿ (ಡಿ) ಸವರ್ಣದೀರ್ಘ ಸಂಧಿ

8. 'ಅನುವರ' ಪದದ ಅರ್ಥ

   (ಎ) ಯುದ್ಧ (ಬಿ) ಸಹಚರ

   (ಸಿ) ಸ್ನೇಹಿತ (ಡಿ) ಮದುವಣಿಗ

9. ‘ಉರಗಪತಾಕ’ ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ

(ಎ) ಕರ್ಮಧಾರಯ ಸಮಾಸ (ಬಿ) ಗಮಕ ಸಮಾಸ

(ಸಿ) ಬಹುವ್ರೀಹಿ ಸಮಾಸ (ಡಿ) ಅಂಶಿ ಸಮಾಸ

10. ‘ವರಮಿರ್ದ’ ಪದದ ಹೊಸಗನ್ನಡ ರೂಪ

(ಎ) ವರಗಿದ್ದ (ಬಿ) ಒರಗಿದ್ದ

(ಸಿ) ಹೊರಗೆಯಿದ್ದ (ಡಿ) ವರೆಗೆ ಇದ್ದ

11. ‘ಗೋಷ್ಠಿ’ ಪದದ ತದ್ಭವ ರೂಪ

(ಎ) ಗೋಟಿ (ಬಿ) ಗಟ್ಟಿ

(ಸಿ) ಗೊಟ್ಟಿ (ಡಿ) ಘಟ್ಟಿ

12. ‘ತೊಳೆದೇನ’ ಪದದ ಗ್ರಾಂಥಿಕ ರೂಪ

(ಎ) ತೊಳೆಯುತ್ತಾಳೆ (ಬಿ) ತೊಳೆಯುತ್ತೇನೆ

(ಸಿ) ತೊಳೆಯೆನು (ಡಿ) ತೊಳೆಯಲೇನು

13. ‘ಸಾಹೇಬರನ್ನು’ ಪದದಲ್ಲಿರುವ ವಿಭಕ್ತಿ

(ಎ) ಪ್ರಥಮಾ (ಬಿ) ಸಪ್ತಮೀ

(ಸಿ) ದ್ವಿತೀಯಾ (ಡಿ) ತೃತೀಯಾ

14. ‘ಹೂವಾಡಿಗ’ ಪದದಲ್ಲಿರುವ ತದ್ಧಿತ ಪ್ರತ್ಯಯ

(ಎ) ಇಗ (ಬಿ) ವಾಡಿಗ

(ಸಿ) ಡಿಗ (ಡಿ) ಅಡಿಗ

15. ‘ಬೇರೊಬ್ಬ’ ಪದವನ್ನು ಬಿಡಿಸಿದಾಗ ಆಗುವ ರೂಪ

(ಎ) ಬೇರು + ಒಬ್ಬ (ಬಿ) ಬೇರೊ + ಬ್ಬ

(ಸಿ) ಬೇರೆ + ಒಬ್ಬ (ಡಿ) ಬೇರೆಯ + ಒಬ್ಬ

16. ಈ ಕೆಳಗಿನ ***'ಅ' ಪಟ್ಟಿ***ಯಲ್ಲಿರುವ ವ್ಯಾಕರಣಾಂಶಗಳಿಗೆ ಸರಿಹೊಂದುವ ಉದಾಹರಣೆಗಳನ್ನು ***'ಬ' ಪಟ್ಟಿ***ಯಿಂದ ಆರಿಸಿ, ಕ್ರಮಾಕ್ಷರದೊಂದಿಗೆ ಉತ್ತರಕ್ಕೆ ಮೀಸಲಿಟ್ಟ ಜಾಗದಲ್ಲಿಯೇ ಬರೆಯಿರಿ : $5 \times 1 = 5$

| ***'ಅ' ಪಟ್ಟಿ*** | | ***'ಬ' ಪಟ್ಟಿ*** | |
|---|---|---|---|
| i) | ಜೋಡಿಪದ | ಅ) | ಪಟಪಟ |
| ii) | ನುಡಿಗಟ್ಟು | ಆ) | ಸುಖದುಃಖ |
| iii) | ಅನುಕರಣಾವ್ಯಯ | ಇ) | ಬೆಂದಬೇಳೆ |
| iv) | ದ್ವಿರುಕ್ತಿ | ಈ) | ಗದ್ಯ ಭಾಗ |
| v) | ಅನ್ಯದೇಶ್ಯಪದ | ಉ) | ತುತ್ತತುದಿ |
| | | ಊ) | ಹೊಟ್ಟೆ ತಣ್ಣಗಿರಲಿ |
| | | ಋ) | ಓಡಿಬಂದು |
| | | ಎ) | ಆಸ್ಪತ್ರೆ |

ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ : $5 \times 1 = 5$

17. ಅಂಗುಲೀಮಾಲನಿಗೆ ..................... ಬದುಕಿರುವ ಶೂರನೊಬ್ಬನೂ ಇಲ್ಲ.

18. ಕೆಂಪ ಗೌರಿಯನ್ನು ..................... ಸಂತೆಯಲ್ಲಿ ಆರು ರೂಪಾಯಿಗೆ ಮಾರಿದ.

19. 'ಇಲಿಯಡ್' ಮತ್ತು 'ಒಡಿಸ್ಸಿ' ಮಹಾಕಾವ್ಯಗಳನ್ನು ಬರೆದ ಗ್ರೀಕ್ ಮಹಾಕವಿ ................... .

20. ತಾಮ್ರ–ತವರಗಳು ಕರಗಿ ಕೂಡಿ .....................ಯಾಗಿ ಥಾಣಿಸುತಿರೆ.

21. ದುರ್ಯೋಧನ ..................... ಸರೋವರದಲ್ಲಿ ಅಡಗಿ ಕುಳಿತುಕೊಂಡಿದ್ದನು.

ಈ ಕೆಳಗಿನ ಪ್ರತಿ ಪ್ರಶ್ನೆಗಳಿಗೂ ***ಒಂದೊಂದು*** ವಾಕ್ಯದಲ್ಲಿ ಉತ್ತರ ಬರೆಯಿರಿ : $10 \times 1 = 10$

22. ಬುದ್ಧ ಯಾರನ್ನು ಅರಸುತ್ತ ಬಂದನು ?

23. ಮಂಜಪ್ಪ ಅವರ ಕಾಲದಲ್ಲಿ ವಿದ್ಯಾರ್ಥಿಗಳ ಗುರಿ ಏನಾಗಿದ್ದಿತು ?

24. ಶಕಟದಾಸನನ್ನು ವಧ್ಯಸ್ಥಾನದಿಂದ ಬಿಡಿಸಿಕೊಂಡು ಹೋದವರು ಯಾರು ?

25. ಚಂದನದಾಸ ಯಾರ ಮಿತ್ರ ?

26. ಮೊಲ ಬಾವಿಯಲ್ಲಿ ಏನನ್ನು ಕಂಡಿತು ?

27. ವ್ಯಾಸ–ವಾಲ್ಮೀಕಿ ಭಾರತದ ಯಾವ ಭಾಗದವರು ?

28. ಮರ್ತ್ಯಾವಳಿಗೆ ಮಾತೆ ಯಾರು ?

29. ಶಿವ ಅರ್ಜನನನ್ನು ಪರೀಕ್ಷಿಸಲು ಯಾವ ವೇಷದಲ್ಲಿ ಬಂದನು ?

30. ಶಬರನ ಕೆಲಸ ಯಾವುದು ?

31. ದುರ್ಯೋಧನ ಕೆಳಗೆ ಬಿದ್ದುದನ್ನು ಕವಿ ಯಾವುದಕ್ಕೆ ಹೋಲಿಸಿದ್ದಾರೆ ?

ಈ ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $15 \times 2 = 30$

32. ನಕ್ಕಾರ ಮುಖದಲ್ಲಿ ಆಗುವ ಬದಲಾವಣೆಗಳಾವುವು ?

33. ಬುದ್ಧನ ಅಪ್ಪುಗೆಯ ಸುಖವನ್ನು ಅನುಭವಿಸಿದ ಅಂಗುಲೀಮಾಲ ತನ್ನಲ್ಲೇ ಹೇಳಿಕೊಂಡಿದ್ದೇನು ?

34. ತಿಪ್ಪೇನಹಳ್ಳಿ ಶಾಲೆಯ ನೋಟೀಸ್ ಬೋರ್ಡ್‌ನ ಮೇಲೆ ಬರೆದಿದ್ದ ಅಂಶಗಳಾವುವು ?

35. ಕಾಲೇಜಿಗೆ ಬಿಡುವಿದ್ದಾಗ ಮಂಜಪ್ಪನವರು ಅಧ್ಯಯನ ಮಾಡುತ್ತಿದ್ದ ಪ್ರಮುಖ ಗ್ರಂಥಗಳಾವುವು ?

36. ಮೇಷ್ಟ್ರು ಮತ್ತೊಂದು ಮದುವೆಯಾಗಿ ಮತ್ತೊಬ್ಬರ ಕೈಗೆ ಈ ಮಕ್ಕಳನ್ನು ಒಪ್ಪಿಸುವುದಿಲ್ಲ ಎಂದು ಹೇಳುವಾಗ ನೀಡಿದ ಕಾರಣವೇನು ?

37. ಅಪಾರ ಶಕ್ತಿ ಇದ್ದರೂ ಗುಲಾಮರಂತೆ ವರ್ತಿಸಲು ಕಾರಣ ಏನು ?

38. ಯುದ್ಧಕ್ಕೆ ಕಾರಣಗಳಾವುವು ಎಂದು ಎಚ್.ಕೆ. ಬಾಲಸೂರಿ ಲೇಖನದಲ್ಲಿ ತಿಳಿಸಿದ್ದಾರೆ.

39. ಪಶುಲೋಮನ ಆತ್ಮಹತ್ಯಾ ಪ್ರಯತ್ನಕ್ಕೆ ಅಮಾತ್ಯರಾಕ್ಷಸನು ತನ್ನಲ್ಲಿ ಊಹಿಸಿದ ಕಾರಣಗಳಾವುವು ?

40. ಕವಿ ಸೇಡಿಯಾಪು ಕೃಷ್ಣಭಟ್ಟರು ಯಾರು ಯಾರನ್ನು ಭಾರತವೆಂಬ ಬೋಧಿವೃಕ್ಷದ ಕೊಂಬೆಗಳೆಂದು ವರ್ಣಿಸಿದ್ದಾರೆ ?

41. ಪ್ರಜಾಮಾತೆಯ ವೈಶಿಷ್ಟ್ಯವೇನು ?

42. ಸತಿ, ಸ್ನೇಹ, ಬಯಕೆಗಳ ವಿಚಾರದಲ್ಲಿ ಕನಕದಾಸರ ಅಭಿಪ್ರಾಯವೇನು ?

43. ಎಲ್ಲಾ ಒಂದೇ ಎಂಬ ಜ್ಞಾನವುಂಟಾದವನಿಗೆ ಪರಮಾತ್ಮನನ್ನು ಕಾಣಲು ಸಾಧ್ಯವಿಲ್ಲ ಎಂದು ಗೋಪಾಲದಾಸರು ಹೇಗೆ ವಿವರಿಸಿದ್ದಾರೆ ?

44. ಬೇಡ ವೇಷಧಾರಿಯಾದ ಶಿವ ಅರ್ಜುನನನ್ನು ಅಪಹಾಸ್ಯ ಮಾಡಿದುದೇಕೆ ?

45. ದುರ್ಯೋಧನನ ಮೇಲೆ ಗದಾಪ್ರಹಾರ ಮಾಡುವಾಗ ಭೀಮ ಕೊಟ್ಟ ಕಾರಣಗಳನ್ನು ತಿಳಿಸಿ.

46. ಲಕ್ಷ್ಮೀಧರಾಮಾತ್ಯನ ಶಾಸನ ಸೂಚಿಸಿರುವ ಲೋಕೋಪಕಾರಿ ಕಾರ್ಯಗಳಾವುವು ?

ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯವನ್ನು ಬರೆಯಿರಿ : $5 \times 3 = 15$

47. "ಹಲ್ಲಿಲ್ಲದ ಬಾಯಿ ಇಲಿಯ ಬಿಲದಂತೆ"

48. "ಒಂದು ಬೆಳೆಯೋ ಚಿಗುರು; ಒಂದು ಉದುರೋ ಹಣ್ಣೆಲೆ"

49. "ಶಕ್ತಿಯೇ ಜೀವನ, ದುರ್ಬಲತೆಯೇ ಮರಣ"

50. "ಮಾವು–ಬೇವು ಫಲ ಬಲಾ–ಬಲ"

51. "ಕಾವ್ಯ ಪ್ರಯೋಗ ಪರಿಣತಮತಿಗಳ್"

ಈ ಕವಿಗಳ / ಲೇಖಕರ ಕಾಲ, ಸ್ಥಳ ಹಾಗೂ ಒಂದು ಕೃತಿಯನ್ನು ತಿಳಿಸಿ, ವಾಕ್ಯರೂಪದಲ್ಲಿ ಉತ್ತರ ಬರೆಯಿರಿ : $2 \times 3 = 6$

52. ಹೆಚ್.ಕೆ. ಬಾಲಸೂರಿ

53. ಕುಮಾರವ್ಯಾಸ

54. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : $1 \times 4 = 4$

ನಗುಮನದಿ ______________________

______________________ ಮಂಕುತಿಮ್ಮ.

***ಅಥವಾ***

ಸನ್ನೆಯರಿತು ______________________

______________________ ದೈವವೇತಕೆ.

55. ಈ ಕೆಳಗಿನ ಗಾದೆಗಳಲ್ಲಿ ಯಾವುದಾದರೂ ***ಒಂದನ್ನು*** ವಿಸ್ತರಿಸಿ ಬರೆಯಿರಿ : 1 × 3 = 3

— ಕಟ್ಟುವುದು ಕಠಿಣ; ಕೆಡಹುವುದು ಸುಲಭ

— ಕೈ ಕೆಸರಾದರೆ ಬಾಯಿ ಮೊಸರು

— ಉಪಾಯ ಬಲ್ಲವನಿಗೆ ಅಪಾಯವಿಲ್ಲ

56. ಈ ವಾಕ್ಯದಲ್ಲಿರುವ ಅಲಂಕಾರವನ್ನು ಗುರುತಿಸಿ, ಸಮನ್ವಯಗೊಳಿಸಿ ಬರೆಯಿರಿ : 1 × 3 = 3

ಮರಗಿಡಗಳೆಲ್ಲಾ ಹುಲಿತಿಂದುಬಿಟ್ಟ ದನಗಳ ಮೂಳೆಪಂಜರದಂತೆ ಬರಲಾಗಿವೆ.

57. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ : 1 × 3 = 3

ಬೇಡ ನಿನಗೇಕೆ ಸಾಹಸ

ದಾಡಂಬರ ಮೆನ್ನೊಳಾಹವಕ್ಕನುಗುಣನಂ

58. — ನಿಮ್ಮನ್ನು ಚಿತ್ರದುರ್ಗ ನಗರದ 'ಶಾಂತಿನಿಕೇತನ' ಶಾಲೆಯ ವಿದ್ಯಾರ್ಥಿ/ನಿ 'ಚಂದನ' ಎಂದು ಭಾವಿಸಿಕೊಂಡು, ನಿಮ್ಮ ಶಾಲಾಗ್ರಂಥಾಲಯಕ್ಕೆ 'ಭಾರತ–ಭಾರತಿ' ಮಾಲಿಕೆಯ ಪುಸ್ತಕಗಳನ್ನು ಕಳುಹಿಸಿಕೊಡುವಂತೆ ಕೋರಿ 'ಬೆಂಗಳೂರಿನ ಕಾಮಧೇನು ಪ್ರಕಾಶನ'ದ ಪ್ರಕಾಶಕರಿಗೆ ಮನವಿಪತ್ರ ಬರೆಯಿರಿ. 1 × 5 = 5

***ಅಥವಾ***

— ನಿಮ್ಮ ಜೀವನದ ಮುಂದಿನ ಗುರಿಗಳ ಬಗ್ಗೆ ತಿಳಿಸುತ್ತಾ 'ಮಾಗಡಿ'ಯಲ್ಲಿರುವ ನಿಮ್ಮ ಸ್ನೇಹಿತ/ತೆ 'ಭುವನ'ಗೆ ಪತ್ರ ಬರೆಯಿರಿ :

59. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ***ಒಂದು*** ವಿಷಯವನ್ನು ಕುರಿತಂತೆ ಹದಿನೈದು ಸಾಲುಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ : 1 × 5 = 5

— ಪರಿಸರ ಸಂರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ

— ಸ್ವಚ್ಛ ಭಾರತ ಆಂದೋಲನದ ಮಹತ್ವ

— ನನ್ನ ಕನಸಿನ ಭಾರತ

60. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ***ಒಂದು*** ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 1 × 4 = 4

— ಅಜಗಣ್ಣನ ಯೋಗದ ಬಗ್ಗೆ ಮುಕ್ತಾಯಕ್ಕನ ಅಭಿಪ್ರಾಯವೇನು ?

***ಅಥವಾ***

61. & 62 — ಮಾತೃಭೂಮಿ ಕವನದ ಸಾರಾಂಶವನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬರೆಯಿರಿ.

ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ***ಎರಡು*** ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 × 4 = 8

— ಭಾಷೆ ಸತ್ವಪೂರ್ಣವಾಗಿ ವಿಕಾಸಗೊಳ್ಳುವುದು ಯಾವಾಗ ?

— ಮೊಲ ಸಿಂಹವನ್ನು ಕೊಂದ ಬಗೆ ವಿವರಿಸಿ.

— ಗೌರಿ 'ತ್ಯಾಗಮಯಿ' ಎಂಬುದನ್ನು ಹೇಗೆ ಸಮರ್ಥಿಸಬಹುದು.

63. ಈ ಕೆಳಗಿನ ಪದ್ಯಭಾಗದ ಸಾರಾಂಶವನ್ನು ಬರೆಯಿರಿ : 1 × 4 = 4

ಹಾಡುಂಡ ತವರೀಗಿ ಏನೆಂದು ಹಾಡಲೆ
ಹೊಳೆದಂಡಿಲಿರುವ ಕರಕೀಯ ಕುಡಿಯಂಗ
ಹಬ್ಬಲೆ ಅವರ ರಸಬಳ್ಳಿ.